**ಅಭ್ಯಾಸ ಪ್ರಶ್ನೆ ಪತ್ರಿಕೆ -೧ ೧೦ ನೆಯ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು -೪೦**

**ಸೂಚನೆಗಳು : ಕೊಟ್ಟಿರುವ ಪ್ರಶ್ನೆಗಳು ಬಹು ಆಯ್ಕೆ ಮಾದರಿಯ ಪ್ರಶ್ನೆಗಳಾಗಿವೆ . ಪ್ರತಿ ಪ್ರಶ್ನೆಗೂ ಒಂದೊಂದು ಅಂಕ ನಿಗದಿ ಪಡಿಸಲಾಗಿದೆ . ಪ್ರತಿ ಪ್ರಶ್ನೆಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .**

**೧ . ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ತುದಿಗಾಲಲ್ಲಿ ನಿಂತು ಕಾಯುತ್ತಿದ್ದವರು ———**
**ಎ) ಮುದುಕಿಯ ಗಂಡ ಬಿ) ಸಿ)ಮುದುಕಿಯ ಸೊಸೆ ಸಿ) ರಾಹಿಲ್ ಡಿ ) ಮುದುಕಿಯ ಮಗ**

**೨. ಮುದುಕಿಯು ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತು ——**
**ಎ) ಅಷ್ಟರಲ್ಲಿ ಬಂತು ಯುದ್ಧ ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಿತ್ತು ಬಿ) ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ? ಯುದ್ಧವಂತೆ ಯುದ್ಧ ಸಿ) ಗಾಯ ?ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ ? ಡಿ) ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ ?**

**೩. ಸೌಮಿತ್ರಿ ಎಂದು ಈತನನ್ನು ಕರೆಯುತ್ತಾರೆ —-**
**ಎ) ಲಕ್ಷ್ಮಣ. ಬಿ) ಶ್ರೀರಾಮ. ಸಿ) ಕರ್ಣ. ಡಿ ) ಭರತ**

**೪ . ಶಬರಿ ಗೀತ ನಾಟಕದ ಕರ್ತೃ ———**
**ಎ) ಕುವೆಂಪು. ಬಿ) ಎ . ಎನ್ . ಮೂರ್ತಿರಾವ್ ಸಿ) ಪು. ತಿ. ನ . ಡಿ) ಜಿ . ಎಸ್ . ಶಿವರುದ್ರಪ್ಪ.**

**೫ . ಕೈಗಾರಿಕೀಕರಣ ಇಲ್ಲವೇ ಅವನತಿ ಎಂದು ಘೋಷಣೆ ಮಾಡಿದವರು**
**ಎ) ಜವಹರಲಾಲ ನೆಹರು ಬಿ) ಸರ್ ಎಂ. ವಿಶ್ವೇಶ್ವರಯ್ಯ. ಸಿ) ನಾಲ್ವಡಿ ಕೃಷ್ಣರಾಜ ಒಡೆಯರು ಡಿ) ಲಾರ್ಡ್ ಸಂಡ್ ಹರ್ಸ್ಟ್**

**೬. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಆಚರಿಸುವುದು —-**
**ಎ) ಶಿಕ್ಷಕರ ದಿನಾಚರಣೆ. ಬಿ) ವೈದ್ಯರ ದಿನ ಸಿ) ಇಂಜನಿಯರ್ಸ ದಿನ. ಡಿ) ಕಾರ್ಮಿಕರ ದಿನ**

**೭ .ಇವುಗಳಲ್ಲಿ ದೇವನೂರು ಮಹಾದೇವ ಅವರ ಕೃತಿಗಳು**
**ಎ) ಅಹಲ್ಯೆ ,ಗೋಕುಲ ನಿರ್ಗಮನ ,ರಥಸಪ್ತಮಿ. ಬಿ) ಹಗಲುಗನಸುಗಳು ,ಅಲೆಯುವ ಮನ ,ಮಿನುಗುಮಿಂಚು ಸಿ) ದೇವಶಿಲ್ಪ ,ದೀಪದ ಹೆಜ್ಜೆ, ಅನಾವರಣ ಡಿ)ದ್ಯಾವನೂರು ,ಒಡಲಾಳ ,ಕುಸುಮಬಾಲೆ**

**೮. ಚಾವಣಿ ಇಲ್ಲದ ಗುಡಿಯಲ್ಲಿ ಪೂಜಿತರಾಗುತ್ತಿರುವವರು. —**
**ಎ) ಮನೆಮಂಚಮ್ಮ. ಬಿ) ವಚನಕಾರರು. ಸಿ) ಬುದ್ಧ. ಡಿ) ಉಗ್ರದೇವತೆಗಳು**

**೯ . ಶಾನುಭೋಗರ ಬ್ರಹ್ಮಾಸ್ತ್ರ ——**
**ಎ) ಭಗವದ್ಗೀತೆ. ಬಿ) ಖಿರ್ದಿಪುಸ್ತಕ ಸಿ) ಎತ್ತರದ ಮರ. ಡಿ) ಊರ ಜನರು**

**೧೦ . ಶಾನುಭೋಗರ ವಿಷಯದಲ್ಲಿ ಹುಲಿಗೆ ಮೆಚ್ಚಿಕೆಯಾಗಲು ಕಾರಣ —**
**ಎ) ತನಗೆ ಎದುರಾಳಿಯೇ ಸಿಕ್ಕಿದನೆಂಬ ಮೆಚ್ಚುಕೆ ಬಿ) ಶಾನುಭೋಗರು ದುಂಡು ದುಂಡಾಗಿರುವರೆಂದು ಸಿ) ಶಾನುಭೋಗರು ಬೆನ್ನು ತಿರುಗಿಸಿ ನಡೆಯುತ್ತಿದ್ದರಿಂದ**
**ಡಿ) ಶಾನುಭೋಗರು ಮರ ಏರಲು ಓಡಿದ್ದರಿಂದ**

**೧೧. ಕಳ್ಳನಿಗೆ ಸುಳ್ಳೇ ಬಲ ಎಂದು ಯೋಚಿಸಿದವರು —-**
**ಎ) ಧರ್ಮಬುದ್ಧಿ. ಬಿ) ಪ್ರೇಮಮತಿ ಸಿ) ದುಷ್ಟಬುದ್ಧಿ. ಡಿ) ಧರ್ಮಾಧಿಕರಣರು**

mamatabhagwat1@gmail.com ಕನ್ನಡತಿ ಮಮತಾ ಭಾಗ್ವತ್ ೮೭೬೨೧೭೧೩೪೪

**೧೨. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೀಗೆ ಕಳೆದನು —-**
**ಎ) ವ್ಯಾಪಾರ ಮಾಡುವುದರಲ್ಲಿ. ಬಿ) ದೇವ ಗುರು ದ್ವಿಜರ ಪೂಜೆ ಮಾಡುವುದರಲ್ಲಿ. ಸಿ) ಸಂಗೀತ ಕೇಳುವುದರಲ್ಲಿ. ಡಿ) ಹೊಲದಲ್ಲಿ ಉಳುಮೆ ಮಾಡುತ್ತ.**

**೧೩. ಯಾವ ಎಚ್ಚರದಲ್ಲಿ ಬದುಕಬೇಕು ?**
**ಎ) ಮತಗಳೆಲ್ಲವೂ ಪಥಗಳು. ಬಿ) ಎಲ್ಲ ಮತಗಳೂ ಬೇರೆ ಬೇರೆ ಸಿ) ಮತಗಳೆಲ್ಲವೂ ಭಿನ್ನ ಭಿನ್ನವಾದ ಕನಸುಗಳು. ಡಿ) ಮತಗಳೆಲ್ಲವೂ ವಿರುದ್ಧ ಪಥಗಳು**

**೧೪.ಪ್ರೀತಿಯ ಹಣತೆಯನ್ನು ಇಲ್ಲಿ ಹಚ್ಚಬೇಕು —-**
**ಎ) ದೀಪಾವಳಿಯಲ್ಲಿ. ಬಿ) ದೇವಸ್ಥಾನಗಳಲ್ಲಿ ಸಿ) ಹಾದಿಬೀದಿಗಳಲ್ಲಿ. ಡಿ) ಸುತ್ತಲು ಕವಿಯುವ ಕತ್ತಲೆಯೊಳಗೆ**

**೧೫ . ಹಕ್ಕಿಯ ಕಣ್ಣುಗಳು ——**
**ಎ) ನಕ್ಷತ್ರಗಳು. ಬಿ) ಸೂರ್ಯ ಚಂದ್ರರು. ಸಿ) ಮಂಗಳ ಮತ್ತು ಶುಕ್ರ. ಡಿ) ಆಕಾಶ ,ಭೂಮಿ**

**೧೬ . ಕವಿ ಬೇಂದ್ರೆಯವರು ಹಕ್ಕಿಯನ್ನು ಯಾವುದರ ಸಂಕೇತವಾಗಿ ವರ್ಣಿಸಿದ್ದಾರೆ ?**
**ಎ) ಕಾಲ. ಬಿ)ಆಕಾಶ. ಸಿ) ಭೂಮಿ. ಡಿ) ಮಳೆ**

**೧೭ . ಹಲಗಲಿ ಬೇಡರ ಮುಖಂಡರು —-**
**ಎ)ರಾಮ. ಬಿ)ಬಾಲ ಸಿ ) ಜಡಗ ಮತ್ತು ರಾಮ. ಡಿ) ಮೇಲಿನ ಎಲ್ಲರು**

**೧೮. ಲಾವಣಿಗಳನ್ನು ಹೀಗೆಂದು ಕರೆಯುತ್ತಾರೆ .**
**ಎ) ಭಾವಗೀತೆ. ಬಿ) ವೀರಗೀತೆ. ಸಿ) ಮನರಂಜನಾ ಗೀತೆ ಡಿ) ಗ್ರಾಮ್ಯ ಗೀತೆ**

**೧೯. ಕುಂತಿಯು ಪಡೆದ ಮಂತ್ರಗಳಲ್ಲಿ ಮೂರನೆಯವನು —-**
**ಎ) ಧರ್ಮರಾಯ. ಬಿ)ಕರ್ಣ. ಸಿ) ಅರ್ಜುನ. ಡಿ) ಭೀಮ.**

**೨೦.ಕೃಷ್ಣನು ಯಾರನ್ನು ಮೇದಿನಿಪತಿ ಎಂದು ಕರೆದಿದ್ದಾನೆ ?**
**ಎ) ಧರ್ಮರಾಯ. ಬಿ) ದುರ್ಯೋಧನ. ಸಿ) ಕರ್ಣ. ಡಿ) ಅರ್ಜುನ**
**೨೧. ಅಶ್ವಯುಜದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?**
**ಎ) ಗಿಳಿಯ ಹಸುರು ಬಿ) ಬೆಟ್ಟದ ಹಸುರು ಸಿ) ಪರ್ವತದ ಹಸುರು ಡಿ) ಅಡಕೆಯ ತೋಟದ ಹಸುರು**

**೨೨. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?**
**ಎ) ರಸ್ತೆಯ ಅಂಚು. ಬಿ) ಬನದ ಅಂಚು. ಸಿ ) ಬೆಟ್ಟದ ಅಂಚು ಡಿ) ಗದ್ದೆಯ ಬದಿ**

**೨೩. ದುರ್ಯೋಧನನು ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ಕಾಣಲು ಬರುವ ಕಾರಣ**
**ಎ) ಯುದ್ಧವನ್ನು ನಿಲ್ಲಿಸಬೇಕೆಂಬ ಆಶಯದಿಂದ. ಬಿ) ಯುದ್ಧದಲ್ಲಿ ಪ್ರಾಣ ಕಳೆದುಕೊಂಡವರ ಬಗ್ಗೆ ವಿವರಿಸಲು ಸಿ) ಭೀಷ್ಮರ ಸಲಹೆ ಪಡೆಯಲು. ಡಿ) ಪಾಂಡವರಿಂದ ತನಗಾಗುವ ಸೋಲಿನಿಂದ ತಪ್ಪಿಸಿಕೊಳ್ಳಲು**

**೨೪ . ಯಾರಿಲ್ಲದ ಭೂಮಿಯಲ್ಲಿ ಮತ್ತೆ ಪಾಂಡವರೊಂದಿಗೆ ಆಳ್ವಿಕೆ ಸಾಧ್ಯವಿಲ್ಲವೆಂಬುದು ದುರ್ಯೋಧನನ ಅಭಿಪ್ರಾಯವಾಗಿದೆ**
**ಎ) ಕರ್ಣ ದುಶ್ಯಾಸನರಿಲ್ಲದ ಭೂಮಿಯಲ್ಲಿ. ಬಿ) ತನ್ನ ಸೈನಿಕರಿಲ್ಲದ ಭೂಮಿಯಲ್ಲಿ ಸಿ) ತನ್ನ ಬಂಧು ಬಾಂದವರಿಲ್ಲದ ಭೂಮಿಯಲ್ಲಿ. ಡಿ) ಕರ್ಣ ,ದುಶ್ಯಾಸನರನ್ನು ಹೊರತುಪಡಿಸಿ ಕಳೆದುಕೊಂಡ ಉಳಿದ ಸಹೋದರರಿಲ್ಲದ ಭೂಮಿಯಲ್ಲಿ**

**೨೫. ಶ್ರೀರಾಮನ ಅಶ್ವಮೇಧದ ಕುದುರೆಯು ಯಾರ ಆಶ್ರಮವನ್ನು ಪ್ರವೇಶಿಸಿತು ?**
**ಎ) ವಸಿಷ್ಠ ಮಹರ್ಷಿ. ಬಿ) ವಾಲ್ಮೀಕಿ ಮಹರ್ಷಿ ಸಿ) ಅಗಸ್ತ್ಯ ಋಷಿ. ಡಿ) ಗೌತಮ ಋಷಿ**

**೨೬ . ಲವನು ಕುದುರೆಯನ್ನು ಯಾವುದಕ್ಕೆ ಕಟ್ಟಿದನು ?**
**ಎ) ಬಾಳೆಯ ಮರ. ಬಿ) ಮಾವಿನ ಮರ. ಸಿ) ಆಲದ ಮರ. ಡಿ) ಆಶ್ರಮದ ಕಂಬ**

**೨೭ .ಕುವೆಂಪುರವರು ಮಾನವತಾ ಮಿತ್ರ ಎಂದು ಇವರನ್ನು ಕರೆದಿದ್ದಾರೆ —**
**ಎ) ಭಗತ್ ಸಿಂಗ್ ಬಿ) ಸ್ವಾಮಿ ವಿವೇಕಾನಂದ. ಸಿ) ಮಹಾತ್ಮಾ ಗಾಂಧಿ. ಡಿ) ಬುದ್ಧ.**

**೨೮.ತೂತು ಬಿದ್ದ ಸೀರೆಯಲಿ ಸೊರಗಿದವನು ——**
**ಎ) ವಸಂತ. ಬಿ) ಚಂದ್ರ. ಸಿ) ಕೇರಿಯ ಮಾರ. ಡಿ)ಬಾಲರವಿ**

**೨೯. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದ ವರ್ಷ —-**
**ಎ) ೧೯೨೦. ಬಿ)೧೯೧೯. ಸಿ)೧೯೧೮. ಡಿ) ೧೯೨೯**

**೩೦. ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಜೆರಗ ಹಿಡಿಯೋದು**
**ಎ) ಉತ್ತರಾಣಿ. ಬಿ)ಗರಿಕೆ. ಸಿ)ತಾವರೆ ಡಿ) ಮಲ್ಲಿಗೆ**

**೩೧ . ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ ——**
**ಎ) ೯. ಬಿ)೧೩. ಸಿ) ೫. ಡಿ) ೨೫.**

**೩೨ . ಈ ಕೆಳಗಿನವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆಯಾದ ಪದ ——**
**ಎ) ಚರಚರ. ಬಿ) ಕಟಕಟ. ಸಿ) ಕಾಡುಮೇಡು. ಡಿ) ಮೊತ್ತಮೊದಲು**

**೩೩.ಮೆಲ್ವಾತು ಪದವು ಈ ಸಂಧಿಗೆ ಉದಾಹರಣೆಯಾಗಿದೆ ——**
**ಎ) ಆದೇಶ ಸಂಧಿ. ಬಿ) ಜಶ್ತ್ವ ಸಂಧಿ. ಸಿ) ಆಗಮ ಸಂಧಿ. ಡಿ)ಯಣ್ ಸಂಧಿ**

**೩೪. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧಿನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಚಿಹ್ನೆ —-**
**ಎ) ಅಲ್ಪವಿರಾಮ. ಬಿ)ಅರ್ಧ ವಿರಾಮ. ಸಿ)ಉದ್ಧರಣ. ಡಿ) ವಾಕ್ಯವೇಷ್ಟನ.**

**೩೫. ಇಮ್ಮಾವು ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ——**
**ಎ) ದ್ವಿಗು. ಬಿ)ತತ್ಪುರುಷ. ಸಿ) ಕರ್ಮಧಾರಯ. ಡಿ) ದ್ವಂದ್ವ.**

**೩೬. ಕೂರ್ಮೆ ಪದದ ಅರ್ಥ ——**
**ಎ) ಸ್ನೇಹ. ಬಿ)ಹಿರಿಮೆ. ಸಿ)ಕೀಳಿರಿಮೆ. ಡಿ) ಆಮೆ**

**೩೭. ಬೇಹಾರಿ ಪದದ ತತ್ಸಮ ರೂಪ —**
**ಎ) ಬಿಹಾರಿ. ಬಿ) ವ್ಯವಹಾರ. ಸಿ)ವ್ಯಾಪಾರಿ. ಡಿ) ಭಿಕ್ಷುಕ.**

**೩೮. ಮಾರಿಗೌತಣವಾಯ್ತು ನಾಳಿನ ಭಾರತವು ಇಲ್ಲಿರುವ ಅಲಂಕಾರ —**
**ಎ) ಉಪಮಾ. ಬಿ) ಅರ್ಥಾಂತರನ್ಯಾಸ. ಸಿ)ರೂಪಕ. ಡಿ) ದೃಷ್ಟಾಂತ.**

**೩೯.ಕಟ್ಟುವುದು ಕಠಿಣ ;ಕೆಡಿಸುವುದು ಸುಲಭ ಇದೇ ಅರ್ಥ ಸೂಚಿಸುವ ಇನ್ನೊಂದು ಗಾದೆ ——**
**ಎ) ತಾಳಿದವನು ಬಾಳಿಯಾನು. ಬಿ) ಕಷ್ಟ ಪಟ್ಟರೆ ಫಲವುಂಟು ಸಿ) ಕೈ ಕೆಸರಾದರೆ ಬಾಯಿ ಮೊಸರು. ಡಿ) ಕುಬಾರನಿಗೆ ವರುಷ;ದೊಣ್ಣೆಗೆ ನಿಮಿಷ**

**೪೦ . ತಂದೆ ,ತಾಯಿ ,ಸಹೋದರ ,ಸಹೋದರಿ, ಬಂಧುಗಳಿಗೆ ಬರೆಯುವ ಪತ್ರ —**

**ಎ) ವ್ಯಾವಹಾರಿಕ ಪತ್ರ. ಬಿ)ಮನವಿ ಪತ್ರ. ಸಿ) ದೂರು ಪತ್ರ. ಡಿ) ಖಾಸಗಿ ಪತ್ರ.**